# ಪದ್ಯ ಭಾಗ

## 4. ನಿಯತಿಯನಾರ್ ಮೀಱಿದಪರ್ – ಜನ್ನ

### ಕೃತಿಕಾರರ ಪರಿಚಯ

ಜನ್ನ ಹಾಸನ ಜಿಲ್ಲೆಯ **ಹಳೇಬೀಡು** ಪ್ರಾಂತ್ಯದಲ್ಲಿ ಕ್ರಿ.ಶ 1225 ಜನಿಸಿದ್ದಾರೆ. ಹೊಯ್ಸಳರ ಬಲ್ಲಾಳನಿಂದ **ಕವಿಚಕ್ರವರ್ತಿ** ಅಭಿದಾನವನ್ನು ಪಡೆದ ಈತ **ಯಶೋಧರ ಚರಿತೆ, ಅನಂತನಾಥಪುರಾಣ ಮತ್ತು ಅನುಭವ ಮುಕುರ** ಕಾವ್ಯಗಳ ಕರ್ತೃ. ಜೈನಧಾರ್ಮಿಕ ಕಾವ್ಯಗಳನ್ನು ರಚಿಸಿದ ಜನ್ನ ಅಹಿಂಸಾ ತತ್ವವನ್ನು ಕಾವ್ಯಗಳಲ್ಲಿ ಸಂದೇಶರೂಪದಲ್ಲಿ ನೀಡಿದ ಕವಿ.

ಪ್ರಸ್ತುತ 'ನಿಯತಿಯನಾರ್ ಮೀಱಿದಪರ್' ನಿಗದಿತ ಪದ್ಯ ಭಾಗವನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹೊರತಂದಿರುವ ತೆಕ್ಕುಂಜೆ ಗೋಪಾಲಕೃಷ್ಣಭಟ್ಟ ಅವರ ಸಂಪಾದನಾ ಗ್ರಂಥ ಜನ್ನ ಕವಿ ವಿರಚಿತ **'ಯಶೋಧರ ಚರಿತೆ'** ಕಾವ್ಯದಿಂದ ಆಯ್ದುಕೊಳ್ಳಲಾಗದೆ.

### ಆಶಯ ಭಾವ

ಅಹಿಂಸೆ–ಹಿಂಸೆಯ ಮೇಲೆ, ಧರ್ಮ–ಅಧರ್ಮದ ಮೇಲೆ, ನ್ಯಾಯ–ಅನ್ಯಾಯದ ಮೇಲೆ, ನೀತಿ– ಅನೀತಿಯ ಮೇಲೆ ಜಯವನ್ನು ಸಾಧಿಸಬೇಕೆಂಬುದು ಲೋಕದ ಆಶಯ. ಈ ಆಶಯಕ್ಕನುಸಾರ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳ ಬಗೆಗೆ ಸದಾ ಎಚ್ಚರದಿಂದ ಇರಬೇಕು. ಸ್ವಲ್ಪ ಮೈ ಮರೆತರೂ ಅಮೃತಮತಿಯಂತೆ ನಾಯಕ ನರಕವನ್ನು ಅನುಭವಿಸಬೇಕಾದೀತು. ಇಲ್ಲದಿದ್ದರೆ...... "ಮನಸಿಜನ ಮಾಯೆ ವಿಧಿವಿಲಸನದ ನೆರಂಬಡೆಯೆ ಕೊಂದು ಕೂಗದೆ ನರರಂ" (ಮನ್ಮಥನ ಮಾಯೆ ವಿಧಿವಿಲಾಸದ ನೆರವನ್ನು ಪಡೆಯಲಾಗಿ ಅದು ಮನುಷ್ಯರನ್ನು ಕೊಂದು ಕೂಗುವುದಿಲ್ಲವೇ?) ಎಂದು ನಿಟ್ಟುಸಿರು ಬಿಡುವಂತಾಗುವುದು. ತಾಳ್ಮೆ ಮತ್ತು ಅಹಿಂಸೆಯನ್ನು ತಿಳಿಸುವುದೇ ಪ್ರಸ್ತುತ ಪದ್ಯಪಾಠದ ಆಶಯವಾಗಿದೆ.

### ಪದಗಳ ಅರ್ಥ

ಅಡಗು – ಮಾಂಸ
ಅಭೀತೆಯಾಗು – ಹೆದರದಿರು
ಅಲರ್ವೊಣ್ದ – ಹೂ ಬಿಟ್ಟ
ಉಯ್ – ಒಯ್ಯು, ಕರೆದುಕೊಂಡು ಹೋಗು.
ಚರಿಗೆ – ಭಿಕ್ಷಾಟನೆ
ತಳಾಱ – ಕಾವಲುಗಾರ
ನಿಯತಿ – ವಿಧಿ ನಿಯಮ
ಬಳರಿ – ಮಾರಿಯ ಹೆಸರು
ಅಡಿಮಂಚಿಕೆಯೊಳ್ – ಕೆಳಮಂಚ
ಅಱಿಕೆ – ತಿಳಿವಳಿಕೆ
ಅವಧಾರಿಪುದು – ಗಮನಕೊಡುವುದು
ಕುಸುರಿದಱಿದ – ಚಿಕ್ಕ ತುಂಡಾಗಿ ಕತ್ತರಿಸಿದ
ತರಕ್ಷು – ಹುಲಿ
ದೊರೆವೆತ್ತು – ಪ್ರಾಪ್ತವಾಗಿ, ಒದಗಿ
ನೀರಜ – ತಾವರೆ;

### ಪೂರ್ವ ಕಥೆ ಮತ್ತು ಪದ್ಯದ ಸಾರಾಂಶ

ರಾಜಪುರ ಎಂಬ ಪಟ್ಟಣದಲ್ಲಿ ಮಾರಿದತ್ತ ಎಂಬ ದೊರೆ ಇದ್ದನು.ಇದೇ ಪುರದಲ್ಲಿ ಚಂಡಮಾರಿ ದೇವಾಲಯವಿತ್ತು. ಆಶ್ವಯುಜ ಹಾಗೂ ಚೈತ್ರಋತುಗಳಲ್ಲಿ ದೊರೆ ಮತ್ತು ಪ್ರಜೆಗಳು ಜಾತ್ರೆ ನಡೆಸಿ, ದೇವಿಯನ್ನು ಆರಾಧಿಸುತ್ತಿದ್ದರು. ಒಮ್ಮೆ ಚೈತ್ರಮಾಸದಲ್ಲಿ ಜಾತ್ರೆ ನಡೆಯಬೇಕಿತ್ತು.

ಮಾರಿಗೆ ಬಲಿ ಕೊಡುವುದಕ್ಕಾಗಿ ಮಾನವರನ್ನು ಹಿಡಿದುತರುವಂತೆ ಮಾರಿದತ್ತನು ತಳಾರ ಚಂಡಕರ್ಮನಿಗೆ ಆಜ್ಞಾಪಿಸಿದನು. ಅವನು ಸುದತ್ತಾಚಾರ್ಯ ಮುನಿಗಳೊಡನೆ ಆ ಪುರಕ್ಕೆ ಬಂದು ಭಿಕ್ಷೆಗೆ ಹೊರಟಿದ್ದ ಎಳೆವಯಸ್ಸಿನ ಸಹೋದರ ಸಹೋದರಿಯರಾದ ಅಭಯಮತಿ ಮತ್ತು ಅಭಯಮತಿಯರನ್ನು ಹಿಡಿದುತಂದನು. ಮಾರಿಯ ಮನೆಯ ಭಯಂಕರ ದೃಶ್ಯದಿಂದ ಆ ಮಕ್ಕಳು ಸ್ವಲ್ಪವೂ ವಿಚಲಿತರಾಗಲಿಲ್ಲ. ಅವರ ಧೈರ್ಯ, ಸ್ಥೈರ್ಯಗಳನ್ನು ಕಂಡು ಬೆಕ್ಕಸಬೆರಗಾದ ಮಾರಿದತ್ತನು ಅವರನ್ನು ಬಲಿಕೊಡದೆ ಅವರ ವೃತ್ತಾಂತವನ್ನು ತಿಳಿಯಬಯಸಿದನು. ಅಭಯರುಚಿಯು ತಮ್ಮ ಪೂರ್ವ ಕಥೆಯನ್ನು ನಿರೂಪಿಸಿದನು.

ಉಜ್ಜಯನಿಯ ರಾಜಕುಮಾರ ಯಶೋಧರ. ತಂದೆ ಯಶೌಘ, ತಾಯಿ ಚಂದ್ರಮತಿ, ಪತ್ನಿ ಅಮೃತಮತಿ. ಯಶೋಧರ ಅಮೃತಮತಿಯರು ಅನ್ಯೂನ್ಯವಾಗಿದ್ದು ಸುಖದಿಂದಿದ್ದರು. ಅತ್ಯಂತ ಚೆಲುವು, ಸುಂದರ ಸಕಲ ವಿದ್ಯಾಪಾರಂಗತ ಹಾಗೂ ಸುಸಂಸ್ಕೃತನಾದ ಯಶೋಧರನ ಪತ್ನಿ ಅಮೃತಮತಿಯು ಕುರುಪಿಯಾದ ಅಷ್ಟಾವಂಕ ಮಾವಟಿಗನ ಗಾನಮಾಧುರ್ಯಕ್ಕೆ ಮನಸೋತು ಪತಿಗೆ ದ್ರೋಹ ಬಗೆದಳು. ಪತ್ನಿಯ ಹೇಯಕೃತ್ಯವನ್ನು ಕಣ್ಣಾರೆಕಂಡ ಯಶೋಧರನು ಅತ್ಯಂತ ಖಿನ್ನನಾಗುವನು. ತಾಯಿ ಚಂದ್ರಮತಿದೇವಿಯು ಪರಿಪರಿಯಾಗಿ ಬೇಡಿಕೊಂಡಾಗ ಮನಸ್ಸಿನ ಖಿನ್ನತೆಗೆ ಕಾರಣವನ್ನು ಹೇಳಲಾಗದೆ ಕಳದೆ ರಾತ್ರಿ ದುಸ್ವಪ್ನವೊಂದು ಕಂಡದ್ದಾಗಿ ಹೇಳುವನು. ಸ್ವಪ್ನದೋಸ ನಿವಾರಣೆಗಾಗಿ ಪ್ರಾಣಿಬಲಿ ಕೊಡಲು ಒಪ್ಪದೇ ತಾಯಿಯ ಸಮಾಧಾನಕ್ಕಾಗಿ ಹಿಟ್ಟಿನಿಂದ ಮಾಡಿದ ಕೋಳಿಯೊಂದನ್ನು ಬಲಿಕೊಡಲು ಒಪ್ಪುವನು. ಹಿಟ್ಟಿನಕೋಳಿಯನ್ನು ಬಲಿಕೊಟ್ಟಾಗ ಅದರೊಳಗೆ ಅಡಗಿದ್ದ ಬೆಂತರವೊಂದು ಕೂಗಿ ಅಸುನೀಗಿತು. ಇದರಿಂದ ಮತ್ತೂ ಖಿನ್ನನಾದ ಯಶೋಧರನು, ಮಗನಾದ ಯಶೋಮತಿಗೆ ಪಟ್ಟಕಟ್ಟಿ ಕಾಡಿಗೆ ತಪಕ್ಕೆ ಹೊರಡಲು ಅನುವಾಗುವನು. ವಿಷಯ ತಿಳಿದ ಅಮೃತಮತಿಯು, ಗಂಡ ಹಾಗೂ ಅತ್ತೆಯನ್ನು ವಿಷವಿಕ್ಕಿ ಕೊಲ್ಲುವಳು.

ಸತ್ತ ಯಶೋಧರ – ಚಂದ್ರಮತಿಯರು ಮುಂದಿನ ಜನ್ಮಗಳಲ್ಲಿ ನಾನಾ ಜನ್ಮಗಳಲ್ಲಿ ಜನಿಸಿದರು. ಒಮ್ಮೆ ಅಕಂಪನಮುನಿಯ ಉಪದೇಶವನ್ನು ಕೇಳಿದ ಕೋಳಿಗಳು ಜ್ಞಾತಿಸ್ಮರಗಳಾಗಿ ವ್ರತವನ್ನು ಆಚರಿಸಿ, ಹರ್ಷದಿಂದ ಕಲೆತಾಗ, ವನವಿಹಾರಕ್ಕೆ ಹೋಗಿದ್ದ ಯಶೋಮತಿಯ ಬಾಣಕ್ಕೆ ತುತ್ತಾಗುವುವು. ಬಳಿಕ ಯಶೋಮತಿಯ ಪತ್ನಿ ಕುಸುಮಾವಳಿಯ ಮಕ್ಕಳಾಗಿ ಹುಟ್ಟುವುವು. ಆ ಅವಳಿ ಮಕ್ಕಳೇ ಅಭಯರುಚಿ ಮತ್ತು ಅಭಯಮತಿ. ಅವರು ಮುಂದೆ ಸುದತ್ತಾಚಾರ್ಯರಲ್ಲಿ ಶಿಷ್ಯವೃತ್ತಿಯನ್ನು ಸ್ವೀಕರಿಸಿದರು.

## ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

1. ಮುತ್ತುಗದ ಹೂವುಗಳು ಎಲ್ಲಿ ಉದುರಿ ಬಿದ್ದಿದ್ದವು?
   **ಉತ್ತರ** : ಮುತ್ತುಗದ ಹೂವುಗಳು ಮಾವಿನ ಮರದ ಕೆಳಗೆ ಮಾಂಸದ ತುಂಡುಗಳಂತೆ ಬಿದ್ದಿದವು.
2. ವನದಲ್ಲಿ ಅರಗಿಳಿಗಳು ಏನೆಂದು ಉಲಿಯುತ್ತಿದ್ದವು?
   **ಉತ್ತರ** : ವನದಲ್ಲಿ ಅರಗಿಳಿಗಳು ಮಲಯಪರ್ವತದ ಗಾಳಿಗೆ ತಾವರೆ ಹೂವುಗಳು ಸೂರ್ಯನಿಗೆ ನಮಸ್ಕಾರ ಮಾಡಿದಂತೆ ಕಾಣಿಸುತ್ತಿದೆ. ಎಂದು ಉಲಿಯುತ್ತಿದ್ದವು.
3. ಯಾವ ದೇವತೆಯ ಹೆಸರಿನಲ್ಲಿ ಜಾತ್ರೆಯು ನಡೆಯುತ್ತಿತ್ತು?
   **ಉತ್ತರ** : ಚಂಡಮಾರಿ ಎಂಬ ದೇವತೆಯ ಹೆಸರಿನಲ್ಲಿ ಜಾತ್ರೆಯು ನಡೆಯುತ್ತಿತ್ತು.
4. ಮಾರಿದತ್ತನ ಬಳಿಯಿದ್ದ ತಳಾರನ ಹೆಸರೇನು?
   **ಉತ್ತರ** : ಮಾರಿದತ್ತನ ಬಳಿಯಲ್ಲಿ ಚಂಡಕರ್ಮ ಎಂಬ ತಳಾರನಿದ್ದನು.
5. ಚಂಡಕರ್ಮನು ಯಾರನ್ನು ಹಿಡಿದು ತಂದನು?
   **ಉತ್ತರ** : ಚಂಡಕರ್ಮನು ಅಭಯರುಚಿ ಮತ್ತು ಅಭಯಮತಿ ಎಂಬ ಎಳೆವಯಸ್ಸಿನ ಸಹೋದರ ಸಹೋದರಿಯರನ್ನು ಹಿಡಿದು ತಂದನು.

## ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮಾವಿನ ಮರದಡಿಯಲ್ಲಿ ಉದುರಿದ್ದ ಮುತ್ತುಗದ ಹೂವುಗಳು ಹೇಗೆ ಕಾಣುತ್ತಿದ್ದವು?
   **ಉತ್ತರ** : ಶಿಶಿರ ಋತುವು ಕಳೆದು ವಸಂತಕ್ಕೆ ಕಾಲಿರಿಸಿದಾಗ ಮಾವಿನ ಮರವೆಲ್ಲವೂ ಹೂವಿನಿಂದ ಕೂಡಿತ್ತು ಮಾವಿನ ತೊಪಿನಲ್ಲಿ ತುಂಡು ತುಂಡಾಗಿ ಕತ್ತರಿಸಿದ ಮುತ್ತುಗದ ಹೂಗಳು ಗಾಳಿಗೆ ಹಾರಿ ಮಾವಿನ ಮರದ ಕೆಳಗೆ ಮಾಂಸದ ತುಂಡುಗಳಂತೆ ಕಾಣಿಸುತ್ತಿದ್ದವು.
2. ಮಾರಿದತ್ತ ಹಾಗೂ ಜನರು ಏಕೆ ಒಂದೆಡೆ ಸೇರಿದ್ದರು?
   **ಉತ್ತರ** : ರಾಜಪುರವೆಂಬ ಪಟ್ಟಣ ಅದರ ದೊರೆ ಮಾರಿದತ್ತ. ಆ ಪುರದಲ್ಲಿ ಚಂಡಮಾರಿಯ ದೇವಾಲಯವಿತ್ತು. ಅಶ್ವಯುಜ ಮಾಸದಲ್ಲಿ ಮಾರಿದತ್ತ ಹಾಗೂ ಪುರದ ಜನರು ಆ ಊರಿನ ದೇವತೆಯಾದ ಚಂಡ ಮಾರಿಯನ್ನು ಆರಾಧಿಸಿ ಜಾತ್ರೆ ನಡೆಸಲು ಒಂದೆಡೆ ಸೇರಿದ್ದರು.
3. ಚಂಡಕರ್ಮನು ಎಂತಹ ಬಲಿಯನ್ನು ಹುಡುಕಿ ಹೊರಟನು?
   **ಉತ್ತರ** : ಮಾರಿದತ್ತನು ತನ್ನ ತಳಾರನಾದ ಚಂಡಕರ್ಮನಿಗೆ ಮಾರಿಗೆ ಬಲಿಕೊಡುವುದಕ್ಕಾಗಿ ಮಾನವರನ್ನು ಹಿಡಿದು ತರುವಂತೆ ಆಜ್ಞಾಪಿಸಿದನು. ಮಾರಿಯ ಬನದಿಂದ ಹೊರಟ ಚಂಡಕರ್ಮನು ಕಿರಿಯರಾದ ಸತ್ಕುಲ, ತಿಳುವಳಿಕೆಯುಳ್ಳ ಶುಭ ಲಕ್ಷಣದ ಮರ್ತ್ಯ ಜೋಡಿಯನ್ನು ಅರಸುತ್ತಾ ಹೊರಟನು.
4. ಅಭಯರುಚಿಯು ಅಭಯಮತಿಗೆ ಏನೆಂದು ಧೈರ್ಯವನ್ನು ಹೇಳಿದನು?

**ಉತ್ತರ :** ಅಭಯರುಚಿ ಮತ್ತು ಅಭಯಮತಿಯರು ತಮ್ಮ ಗುರುಗಳ ಚರಣಕ್ಕೆ ನಮಸ್ಕರಿಸಿ ಮುನಿಗಳ ಸಮೇತ ಗುರುಗಳ ಉಪವಾಸವನ್ನು ಕಳೆಯುವ ಉದ್ದೇಶದಿಂದ ಭಿಕ್ಷಾಟನೆಗೆ ಆ ಪುರಕ್ಕೆ ಬಂದರು. ಬಾಲಕರನ್ನು ಕಂಡ ತಳಾರ ಚಂಡಕರ್ಮನು ವನದಲ್ಲಿ ಜಿಂಕೆಯನ್ನು ಹುಲಿ ಹಿಡಿಯುವಂತೆ ಹಿಡಿದನು. ಚಂಡಕರ್ಮನ ಕಂಡು ಮಕ್ಕಳು ಸ್ವಲ್ಪವೂ ವಿಚಲಿತರಾಗಲಿಲ್ಲ. ಅಭಯರುಚಿ ಮತ್ತು ಅಭಯಮತಿಯರನ್ನು ಚಂಡಕರ್ಮನೆಂಬ ಪಾಪಕರ್ಮನು ಎಳೆದುಕೊಂಡು ಹೋಗುತ್ತಿರಲು ಅಭಯರುಚಿ ತಂಗಿಗೆ ಮರಣ ಕ್ಕಾಗಿ ಹೆದರಬೇಡ ಅಭೀಯತೆಯಾಗು ಎಂದು ಹೇಳಿದನು.

## ಇ) ಕೊಟ್ಟಿರುವ ಪ್ರಶ್ನೆಗೆ ಸುಮಾರು ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

1. 'ನಿಯತಿಯನಾರ್ ಮೀಱಿದಪರ್' ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಉತ್ತರ :** ರಾಜಪುರವೆಂಬ ಪಟ್ಟಣದಲ್ಲಿ ಮಾರಿದತ್ತ ಎಂಬ ದೊರೆ ಇದ್ದನು. ಆ ಪುರದಲ್ಲಿ ಚಂಡ ಮಾರಿಯ ದೇವಾಲಯವಿತ್ತು ಪ್ರತೀವರ್ಷ ಚೈತ್ರ ಮಾಸದಲ್ಲಿ ದೊರೆ ಮತ್ತು ಪ್ರಜೆಗಳು ಸೇರಿ ಚಂಡಮಾರಿ ದೇವಿಯನ್ನು ಆರಾಧಿಸಿ ಜಾತ್ರೆ ನಡೆಸುತ್ತಿದ್ದರು. ಪ್ರತಿವರ್ಷದಂತೆ ಚಂಡಮಾರಿಗೆ ಬಲಿಕೊಡಲು ಮಾನವರನ್ನು ಹಿಡಿದು ತರುವಂತೆ ಮಾರಿದತ್ತನು ತಳಾರ ಚಂಡಕರ್ಮನಿಗೆ ಆಜ್ಞಾಪಿಸಿದನು. ಅದರಂತೆ ಚಂಡಕರ್ಮನು ಎಳೆಯರನ್ನು ಸತ್ಕುಲದವರನ್ನು ಹುಡುಕುತ್ತಾ ಹೊರಟನು. ಅದೇ ಸಮಯದಲ್ಲಿ ಸುದತ್ತಾಚಾರ್ಯ ಮುನಿಗಳೊಡನೆ ರಾಜಪುರಕ್ಕೆ ಬಂದು ಭಿಕ್ಷೆಗೆ ಹೊರಟಿದ್ದ ಎಳೆವಯಸ್ಸಿನ ಸಹೋದರ, ಸಹೋದರಿಯರಾದ ಅಭಯರುಚಿ ಮತ್ತು ಅಭಯಮತಿಯರನ್ನು ಹುಲಿಯು ಜಿಂಕೆಯನ್ನು ಹಿಡಿಯುವಂತೆ ಚಂಡಕರ್ಮನು ಹಿಡಿದು ತಂದನು. ಆ ಸಮಯದಲ್ಲಿ ಅಭಯರುಚಿಯು ತನ್ನ ತಂಗಿಗೆ ಅಭಯಮತಿಗೆ ಹೆದರಬೇಡ ಅಭೀತೆಯಾಗಿರು ಎಂದು ಹೇಳಿದನು. ತಂಗಿಯು ವಿಧಿಯ ನಿಯಮವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ ಎಂದು ಧೈರ್ಯ ಹೇಳಿದಳು. ವಿನಯದಿಂದ ಎಲ್ಲವನ್ನು ಜಯಿಸ ಬಹುದೆಂದು ಹೇಳಿದಳು. ಚಂಡಮಾರಿಯ ಮನೆಯ ಭಯಂಕರ ದೃಶ್ಯದಿಂದ ಆ ಮಕ್ಕಳು ಸ್ವಲ್ಪವೂ ವಿಚಲಿತರಾಗಲಿಲ್ಲ. ಮಾರಿದತ್ತನು ಅಭಿಯರುಚಿ ಹಾಗೂ ಅಭಿಯಮತಿಯರ ಜನ್ಮ ವೃತ್ತಾಂತವನ್ನು ಕೇಳಿದನು. ತಾಳ್ಮೆ ಮತ್ತು ಅಹಿಂಸೆಯಿಂದ ಎಲ್ಲವನ್ನು ಗೆಲ್ಲಬಹುದೆಂದು ಈ ಪದ್ಯದಿಂದ ತಿಳಿಯುತ್ತದೆ.

## ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

1. "ಪೂಜೆಯೊಳೆಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್"

**ಆಯ್ಕೆ :** ಈ ವಾಕ್ಯವನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹೊರತಂದಿರುವ ತೆಕ್ಕುಂಜೆ ಗೋಪಾಲಕೃಷ್ಣಭಟ್ಟ ಅವರ ಸಂಪಾದನಾ ಗ್ರಂಥ **ಜನ್ನ ಕವಿ** ವಿರಚಿತ **'ಯಶೋಧರ ಚರಿತೆ'** ಕಾವ್ಯದಿಂದ ಆಯ್ದು **'ನಿಯತಿಯನಾರ್ ಮೀಱಿದಪರ್'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ರಾಜಪುರವೆಂಬ ಪಟ್ಟಣದಲ್ಲಿ ಮಾರಿದತ್ತ ಎಂಬ ದೊರೆ ಇದ್ದನು. ಆ ಪುರದಲ್ಲಿ ಚಂಡ ಮಾರಿಯ ದೇವಾಲಯವಿತ್ತು ಪ್ರತಿವರ್ಷ ಚೈತ್ರಮಾಸದಲ್ಲಿ ದೊರೆ ಮತ್ತು ಪ್ರಜೆಗಳು ಸೇರಿ ದೇವಿಯನ್ನು ಆರಾಧಿಸಿ ಜಾತ್ರೆ ನಡೆಸುತ್ತಿದ್ದರು. ಈ ವರ್ಷವೂ ಮಾನವರನ್ನು ಬಲಿಕೊಡುವುದನ್ನು ತಪ್ಪಿಸುವುದಿಲ್ಲವೆಂದು ಹೇಳಿದ ಸಂದರ್ಭದಲ್ಲಿ ದೇವಿಯ ಮುಂದೆ ಮಾರಿದತ್ತನು ಈ ಮಾತನ್ನು ಹೇಳಿದನು.

**ಸ್ವಾರಸ್ಯ :** ಚಂಡಮಾರಿಗೆ ಪ್ರತಿವರ್ಷ ಮಾನವರನ್ನು ಬಲಿಕೊಟ್ಟು ಜಾತ್ರೆ ಮಾಡುವುದು ತಪ್ಪುವುದಿಲ್ಲ ಎಂಬ ಮಾರಿದತ್ತನ ಮಾತನ್ನು ಕವಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಿದ್ದಾರೆ.

2. "ತರಕ್ಷು ಪಿಡಿವಂತೆ ಚಂಡಕರ್ಮಂ ಪಿಡಿದಂ"

**ಆಯ್ಕೆ :** ಈ ವಾಕ್ಯವನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹೊರತಂದಿರುವ ತೆಕ್ಕುಂಜೆ ಗೋಪಾಲಕೃಷ್ಣಭಟ್ಟ ಅವರ ಸಂಪಾದನಾ ಗ್ರಂಥ **ಜನ್ನ ಕವಿ** ವಿರಚಿತ **'ಯಶೋಧರ ಚರಿತೆ'** ಕಾವ್ಯದಿಂದ ಆಯ್ದು **'ನಿಯತಿಯನಾರ್ ಮೀಱಿದಪರ್'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಸುದತ್ತಚಾರ್ಯರ ಶಿಷ್ಯರಾದ ಅಭಯರುಚಿ, ಅಭಯಮತಿಯರು ಗುರುಗಳ ಉಪವಾಸವನ್ನು ಕಳಿಯುವ ಉದ್ದೇಶದಿಂದ ಭಿಕ್ಷಾಟನೆಗೆ ಹೊರಟು ರಾಜಪುರಕ್ಕೆ ಬಂದರು. ಬಾಲಕರನ್ನು ಕಂಡ ತಳಾರ ಚಂಡಕರ್ಮನು ವನದಲ್ಲಿ ಜಿಂಕೆಯನ್ನು ಹುಲಿ ಹಿಡಿಯುವಂತೆ ಹಿಡಿದನು, ಆ ಸಂದರ್ಭದಲ್ಲಿ ಕವಿ ಈ ರೀತಿ ಹೇಳಿದ್ದಾರೆ.

**ಸ್ವಾರಸ್ಯ :** ಹುಲಿಯು ಜಿಂಕೆಯನ್ನು ಹಿಡಿದರೆ ಅದರ ಜೀವ ಹೋದಂತೆ ಹಾಗೆಯೇ ಚಂಡಕರ್ಮನು ಮನುಷ್ಯರನ್ನು ಹಿಡಿದರೆ ಅವರನ್ನು ಚಂಡಮಾರಿಗೆ ಬಲಿಕೊಟ್ಟಂತೆಯೇ ಎಂಬುದು ಸ್ವಾರಸ್ಯಕರವಾಗಿದೆ.

3. "ಅಭೀತೆಯಾಗೆಲಗೆ ತಾಯೆ ಮರಣದ ದೆಸೆಯೊಳ್"

**ಆಯ್ಕೆ :** ಈ ವಾಕ್ಯವನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹೊರತಂದಿರುವ ತೆಕ್ಕುಂಜೆ ಗೋಪಾಲಕೃಷ್ಣಭಟ್ಟ ಅವರ ಸಂಪಾದನಾ ಗ್ರಂಥ **ಜನ್ನ ಕವಿ** ವಿರಚಿತ **'ಯಶೋಧರ ಚರಿತೆ'** ಕಾವ್ಯದಿಂದ ಆಯ್ದು **'ನಿಯತಿಯನಾರ್ ಮೀಱಿದಪರ್'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಅಭಯರುಚಿ ಮತ್ತು ಅಭಯಮತಿಯರನ್ನು ಹುಲಿಯು ಜಿಂಕೆಯನ್ನು ಹಿಡಿಯುವಂತೆ ಚಂಡಕರ್ಮನು ಹಿಡಿದು ತಂದನು. ಆ ಸಮಯದಲ್ಲಿ ಅಭಯರುಚಿಯು ತನ್ನ ತಂಗಿ ಅಭಯಮತಿಗೆ ಹೆದರಬೇಡ ಅಭೀತೆಯಾಗಿರು ಎಂದು ಧೈರ್ಯ ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ನಮಗೆ ಸಾವು ಯಾವ ರೀತಿ ಬರಬೇಕು ಎಂಬುದು ನಮ್ಮ ಹಣೆ ಬರಹದಲ್ಲಿ ಬರೆದಿರುತ್ತದೆ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಅಭಯರುಚಿಯ ಮಾತು ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

4. "ನಿಯತಿಯನಾರ್ ಮೀಱಿದಪರ್"

**ಆಯ್ಕೆ :** ಈ ವಾಕ್ಯವನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹೊರತಂದಿರುವ ತೆಕ್ಕುಂಜೆ ಗೋಪಾಲಕೃಷ್ಣಭಟ್ಟ ಅವರ ಸಂಪಾದನಾ ಗ್ರಂಥ **ಜನ್ನ ಕವಿ** ವಿರಚಿತ **'ಯಶೋಧರ ಚರಿತೆ'** ಕಾವ್ಯದಿಂದ ಆಯ್ದು **'ನಿಯತಿಯನಾರ್ ಮೀಱಿದಪರ್'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಚಂಡಕರ್ಮನು ಅಭಯರುಚಿ ಮತ್ತು ಅಭಯಮತಿಯರನ್ನು ಹುಲಿ ಜಿಂಕೆ ಹಿಡಿಯುವಂತೆ ಹಿಡಿದನು. ಚಂಡಮಾರಿಗೆ ಬಲಿಕೊಡಲು ನಮ್ಮನ್ನು ಸೆರೆ ಹಿಡಿದ್ದಿದ್ದಾನೆ ಎಂಬ ವಿಷಯ ತಿಳಿದ ಅಭಯಮತಿಯು ಭಯ ಪಡುತ್ತಾಳೆ ಆ ಸಂದರ್ಭದಲ್ಲಿ ಅಭಯರುಚಿಯು ಈ ಮಾತಿನಿಂದ ಧೈರ್ಯ ತುಂಬುತ್ತಾನೆ.

**ಸ್ವಾರಸ್ಯ :** ಅಭಯರುಚಿಯ ಧೈರ್ಯ ಗುಣ, ವಿಧಿನಿಯಮವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಅಂಶ ಸ್ವಾರಸ್ಯಕರವಾಗಿದೆ.

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಮಾತ್ರೆಗಳಲ್ಲಿ ಎಷ್ಟು ವಿಧ? ಅವು ಯಾವುವು?

   **ಉತ್ತರ :** ಮಾತ್ರೆಗಳಲ್ಲಿ ಎರಡು ವಿಧ. ಅವೇ ಲಘು ಮತ್ತು ಗುರು.

   ಲಘುವನ್ನು 'U' ಎಂತಲೂ ಗುರುವನ್ನು _ ಎಂತಲೂ ಗುರುತಿಸಲಾಗುವುದು.

2. ಲಘು ಮತ್ತು ಗುರು ಎಂದರೇನು?

   **ಉತ್ತರ :** ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ **ಲಘು**. ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ **ಗುರು.**

3. ಕಂದ ಪದ್ಯದ ಲಕ್ಷಣವನ್ನು ಬರೆಯಿರಿ.

   **ಉತ್ತರ :** • ನಾಲ್ಕು ಪಾದಗಳಿರಬೇಕು.

   • ಒಂದು ಮತ್ತು ಮೂರನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಮೂರು ಮೂರು ಗಣಗಳಿರಬೇಕು.

   • ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಐದೈದು ಗಣಗಳಿರಬೇಕು.

   • ಪ್ರತಿ ಪಾದವೂ ಆದಿಪ್ರಾಸದಿಂದ ಕೂಡಿರಬೇಕು.

## ಆ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.

ಮಾರಿ ಮಲಯಾನಿಳಂ ನವ
ನೀರಜವನಮೆಂಬ ಕೆಂಡದೊಳ್ ದಂಡನಮ
ಸ್ಕಾರದೆ ಬಂದಪನಿತ್ತವ
ಧಾರಿಪುದೆಂಬಂತಿರುಲಿದುವರಗಿಳಿ ಬನದೊಳ್

ನಿಯತಿಯನಾರ್ ಮೀಱಿದಪರ್
ಭಯಮೇವುದೊ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್
ನಯವಿದೆ ಪೆತ್ತ ಪರೀಷಹ
ಜಯಮೆ ತಪಂ ತಪಕೆ ಬೇಱೆ ಕೋಡೆರಡೊಳವೇ

**ಇ) ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

**1.**

| | | |
|---|---|---|
| – U U | UUU U | - - |
| ನಿಂದು ನ | ರಪತಿ ತ | ಳಾಱಿಂ |

| | | | | |
|---|---|---|---|---|
| – – | – UU | U UUU | UU- | - - |
| ಗಂದಂ | ನೀನ್‌ಬರಿ | ಸುಮನುಜ | ಯುಗಮಂ | ಮುನ್ನಂ |

ಕಂದ ಪದ್ಯದ

**2.**

| | | |
|---|---|---|
| UU- | -U U | _ _ |
| ತಡವಾ | ದಪ್ಪುದು | ಪೌರರ್ |

| | | | | |
|---|---|---|---|---|
| UU _ | U U UU | U _ U | _ UU | UU _ |
| ಕುಡುವೇ | ಬ್ಬುದುಹಲ | ವು ಜೀವ | ರಾಶಿಯ | ಬಲಿಯ0 |

ಕಂದ ಪದ್ಯ